ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1193(1581)
ಮಾನ್ಯ ಸದಸ್ಯರ ಹೆಸರು : ಶ್ರೀ. ಕ್ಯಾತಸಂದ್ರ ಎನ್.ರಾಜಣ್ಣ(ಬೆಳ್ಳಾವಿ)
ಉತ್ತರಿಸುವ ಸಚಿವರು : ಶ್ರೀ. ಬಿ.ಎಸ್.ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ] ತುಮಕೂರು ಜಿಲ್ಲೆಯಲ್ಲಿ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು; [ತಾಲ್ಲೂಕು ಮತ್ತು ಹೋಬಳಿವಾರು ನೀಡುವುದು]

ತುಮಕೂರು ಜಿಲ್ಲೆಯಲ್ಲಿ ಇರುವ ಒಟ್ಟು ಪ್ರಾಥಮಿಕ ಶಾಲೆಗಳ ಸಂಖ್ಯೆ, 3462 ಪ್ರೌಢ ಶಾಲೆಗಳ ಸಂಖ್ಯೆ 162, ಪದವಿ ಪೂರ್ವ ಕಾಲೇಜುಗಳ ಸಂಖ್ಯೆ 174[ಸರ್ಕಾರಿ 53, ಅನುದಾನಿತ ಖಾಸಗಿ ಕಾಲೇಜು–65, ಅನುದಾನ ರಹಿತ ಖಾಸಗಿ ಕಾಲೇಜುಗಳು–56]

[ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ]

ಆ] ಈ ಪೈಕಿ ಎಷ್ಟು ಪ್ರಾಥಮಿಕ, ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳು ಸ್ವಂತ ಕಟ್ಟಡದಲ್ಲಿ ನಡೆಯುತ್ತಿವೆ;

ಸ್ವಂತ ಕಟ್ಟಡ ಹೊಂದಿರುವ ಶಾಲೆಗಳ ವಿವರ

ಪ್ರಾಥಮಿಕ ಶಾಲೆಗಳು 3450

ಪ್ರೌಢ ಶಾಲೆಗಳು 123

ಸರ್ಕಾರಿ ಪದವಿ ಪೂರ್ವ ಕಾಲೇಜುಗಳು 51.

ಇ] ಸ್ವಂತ ಕಟ್ಟಡವಿಲ್ಲದೆ ಇರುವ ಶಾಲೆಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಈ] ಬಂದಿದ್ದಲ್ಲಿ ಸ್ವಂತ ಕಟ್ಟಡ ಒದಗಿಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆರ್.ಐ.ಡಿ.ಎಫ್–10 ಮತ್ತು ಆರ್.ಐ.ಡಿ.ಎಫ್–12ರಡಿ ಸರ್ಕಾರಿ ಪ್ರೌಢಶಾಲೆಗಳಿಗೆ ಕಟ್ಟಡ ನಿರ್ಮಾಣಕ್ಕೆ ಅನುದಾನ ಒದಗಿಸಲಾಗಿದೆ. ಆರ್.ಐ.ಡಿ.ಎಫ್–11 ಮತ್ತು ಆರ್.ಐ.ಡಿ.ಎಫ್–12ರಡಿ ಕಟ್ಟಡವಿಲ್ಲದೆ ಮತ್ತು ಕೊಠಡಿಗಳ ಕೊರತೆ ಇರುವ ಪದವಿಪೂರ್ವ ಕಾಲೇಜುಗಳಿಗೆ ಕಟ್ಟಡಗಳನ್ನು ನಿರ್ಮಿಸಲು ಮಂಜೂರಾತಿ ನೀಡಿದೆ.

ಉ] ಶಿಕ್ಷಕರು ಮತ್ತು ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಊ] ಹಾಗಿದ್ದಲ್ಲಿ, ಶಿಕ್ಷಕರ ಮತ್ತು ಸಿಬ್ಬಂದಿ ಕೊರತೆ ನೀಗಿಸುವ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಒಟ್ಟು 348 ಪ್ರಾಥಮಿಕ ಶಾಲಾ ಶಿಕ್ಷಕರುಗಳನ್ನು 2005–06ನೇ ಸಾಲಿಗೆ ನೇಮಕ ಮಾಡಿಕೊಳ್ಳಲಾಗಿದೆ. 2006–07ನೇ ಸಾಲಿಗೆ 321 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿದ್ದು, ಆಯ್ಕೆ ಪಟ್ಟಿ ಪ್ರಕಟಣಾ ಕಾರ್ಯ ಪ್ರಗತಿಯಲ್ಲಿದೆ. ಒಟ್ಟು 85 ಪ್ರೌಢ ಶಾಲಾ ಶಿಕ್ಷಕರುಗಳನ್ನು 2005–06ನೇ ಸಾಲಿಗೆ ನೇಮಕ ಮಾಡಿಕೊಳ್ಳಲಾಗಿದೆ. 2006–07ನೇ ಸಾಲಿಗೆ 222 ಪ್ರೌಢ ಶಾಲಾ ಶಿಕ್ಷಕರ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಿದ್ದು, ಆಯ್ಕೆ ಪಟ್ಟಿ ಪ್ರಕಟಣಾ ಕಾರ್ಯ ಪ್ರಗತಿಯಲ್ಲಿದೆ. ಉಪನ್ಯಾಸಕರು ಮತ್ತು ಸಿಬ್ಬಂದಿ ಕೊರತೆ ನೀಗಿಸಲು ಕಾರ್ಯಭಾರ ಕಡಿಮೆ ಇರುವ ಉಪನ್ಯಾಸಕರು/ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ನಿಯೋಜಿಸಲಾಗಿದೆ.

ಕರ್ನಾಟಕ ವಿಧಾನಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1581 ಕ್ಕೆ ಅನುಬಂಧ

ಕ್ರ ಸಂ.	ತಾಲ್ಲೂಕು	ಹೋಬಳಿ	ಶಾಲೆಗಳ ಸಂಖ್ಯೆ		
			ಪ್ರಾಥಮಿಕ	ಪ್ರೌಢ	ಪದವಿಪೂರ್ವ
01	ಚಿಕ್ಕನಾಯಕನಹಳ್ಳಿ	ಕಸಬಾ	32	01	01
		ಕಂದಿಕೆರೆ	38	02	01
		ಹುಳಿಯಾರು	116	04	02
		ಶೆಟ್ಟಿಕೆರೆ	06	02	01
		ಹಂದನಕೆರೆ	71	01	00
02	ಗುಬ್ಬಿ	ಕಸಬಾ	79	06	02
		ನಿಟ್ಟೂರು	74	03	00
		ಕಡಬಾ	78	03	01
		ಚೇಳೂರು	74	05	00
		ಸಿ.ಎಸ್.ಪುರ	57	02	01
		ಹಾಗಲವಾಡಿ	43	02	01
03	ಕುಣಿಗಲ್	ಕಸಬಾ	77	02	02
		ಕೊತ್ತಿಗೆರೆ	75	03	01
		ಅಮೃತೂರು	55	03	01
		ಹುತ್ತರಿದುರ್ಗ	67	04	00
		ಹುಲಿಯೂರು ದುರ್ಗ	83	04	02
		ಯಡಿಯೂರು	67	01	01
04	ತಿಪಟೂರು	ಕಸಬಾ	85	03	02

		ಕಿಬ್ಬನಹಳ್ಳಿ	52	00	01
		ನೊಣವಿನಕೆರೆ	66	02	01
		ಹೊನ್ನವಳ್ಳಿ	86	03	00
05	ತುಮಕೂರು	ಕಸಬಾ–1	30	02	01
		ಕಸಬಾ–2	67	01	02
		ನಾಗವಲ್ಲಿ	00	00	01
		ಹೆಬ್ಬೂರು	83	06	01
		ಗೂಳೂರು	83	03	01
		ಊರ್ಡಿಗೆರೆ	66	01	00
		ಬೆಳ್ಳಾವಿ	54	00	01
		ಕೋರಾ	75	01	00
06	ತುರುವೇಕೆರೆ	ಕಸಬಾ	110	02	01
		ಮಾಯಸಂದ್ರ	88	03	00
		ದಬ್ಬೇಘಟ್ಟ	66	05	00
		ದಂಡಿನಶಿವರ	48	02	01
07	ಕೊರಟಗೆರೆ	ಕಸಬಾ	46	04	01
		ಹೊಳವನಹಳ್ಳಿ	75	05	01
		ಕೋಳಾಲ	73	04	00
		ಸಿ.ಎನ್.ದುರ್ಗ	56	02	00
		ಐ.ಕೆ.ಕಾಲೋನಿ	00	00	01
08	ಮಧುಗಿರಿ	ಕಸಬಾ	74	03	01
		ದೊಡ್ಡೇರಿ	81	05	02
		ಮಿಡಿಗೇಶಿ	60	05	02
		ಐಡಿ ಹಳ್ಳಿ	44	03	01
		ಕೊಡಿಗೇನಹಳ್ಳಿ	57	05	00
09	ಪಾವಗಡ	ನಿಡಗಲ್	55	00	01
		ಪಾವಗಡ	00	00	01
		ಕಸಬಾ	72	04	02
		ನಾಗಮಡಿಕೆ	21	00	01
		ವೈ.ಎನ್.ಹೊಸ ಕೋಟೆ	60	00	00
10	ಶಿರಾ	ಕಸಬಾ 1	53	01	00

		ಕಸಬಾ 2	73	06	00
		ಶಿರಾ	00	00	03
		ಗೌಡಗೆರೆ	66	06	01
		ಕಳ್ಳಂಬೆಳ್ಳ	44	04	01
		ಬುಕ್ಕಪಟ್ಟಣ	73	03	00

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1194(1393)

ಸದಸ್ಯರ ಹೆಸರು : ಶ್ರೀ. ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವ ಕಲ್ಯಾಣ)

ಉತ್ತರಿಸುವವರು : ಶ್ರೀ ಎಸ್.ಎ. ರವೀಂದ್ರನಾಥ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು)

ಅ) ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಪ್ರಗತಿಯಲ್ಲಿರುವ ಜಲ ನಿರ್ಮಲ ಯೋಜನೆಗಳೆಷ್ಟು? ಹಾಗೂ ಇವುಗಳು ಯಾವ ಹಂತದಲ್ಲಿವೆ. ಇದಕ್ಕಾಗಿ ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣವೆಷ್ಟು? (ಪೂರ್ಣ ಅಂಕಿ ಅಂಶಗಳಲ್ಲಿ ಒದಗಿಸುವುದು)

ಹೈದರಾಬಾದ್ ಕರ್ನಾಟಕ ಪ್ರದೇಶದ ಜಲ ನಿರ್ಮಲ ಯೋಜನೆಯಡಿಯಲ್ಲಿ ಪ್ರಗತಿಯಲ್ಲಿರುವ ಯೋಜನೆಗಳು ಹಾಗೂ ಅವುಗಳ ಪ್ರಗತಿ ಈ ಕೆಳಕಂಡಂತಿದೆ.

ಹಂತ	ಗುಲ್ಬರ್ಗಾ	ಬೀದರ್	ಕೊಪ್ಪಳ	ರಾಯಚೂರು
ಪ್ರಾಯೋಗಿಕ	9	–	–	–
ಬ್ಯಾಚ್–1	135	–	–	–
ಬ್ಯಾಚ್–2	–	208	53	73
ಸಮಗ್ರ ತಾಂಡ ಅಭಿವೃದ್ಧಿ ಯೋಜನೆ–1	72	–	–	–
ಸಮಗ್ರ ತಾಂಡ ಅಭಿವೃದ್ಧಿ ಯೋಜನೆ–2	77	–	–	–
ಬ್ಯಾಚ್–3	185	106	125	49
ಒಟ್ಟು ಕಾಮಗಾರಿಗಳು	469	314	178	122

ಒಟ್ಟು 1083 ಕಾಮಗಾರಿಗಳ ಪೈಕಿ 537 ಕಾಮಗಾರಿಗಳು ಪೂರ್ಣಗೊಂಡಿದ್ದು ಉಳಿದ 546 ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಮೇಲಿನ ಕಾಮಗಾರಿಗಳಿಗೆ ಕಳೆದ ಒಂದು ವರ್ಷದಿಂದ 37.03 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ.